ಈ ಸಾಕ್ಷಿಯನ್ನು ದಿನಾಂಕಃ 25.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

1 ವರ್ಷದ ಮೇಲೆ ನನಗೆ ಅಪಘಾತ ವಾಗಿರುತ್ತದೆ . ಮಲ್ಲೂಪುರಾದಿಂದ ನಾನು ಐರಳ್ಳಿಗೆ ನಮ್ಮ ಯಜಮಾನರಿಗೆ ಸೇರಿದ ಬೈಕ್ ನಲ್ಲಿ ಹೋಗುತ್ತಿದ್ದೆ. ನನಗೆ ಬೈಕ್ ನಂಬರ್ ಹೇಳಲಾಗುವುದಿಲ್ಲ. ನನ್ನ ಯಜಮಾನರಿಗೆ ಬೈಕ್ ಓಡಿಸಲು ಚಾಲನಾ ಪರವಾಣಗಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ . ಸದರಿ ಬೈಕ್ ಗೆ ವಿಮೆ ಇತ್ತು. ನಮ್ಮ ಬೈಕ್ ಗೆ ವಿಮೆ ಇಲ್ಲದ ಕಾರಣ 5 ದಿನ ತಡವಾಗಿ ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಬೈಕ್ ಗೆ ಇನ್ನೊಂದು ಮೋಟರ್ ಬೈಕ್ ಡಿಕ್ಕಿ ಹೊಡೆದಿರುತ್ತದೆ . ನಮ್ಮ ಯಜಮಾನರ ನಿರ್ಲಕ್ಷ್ಯತನದಿಂದ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಯಜಮಾನರ ಬೈಕ್ ಗೆ ವಿಮೆ ಇಲ್ಲದ ಕಾರಣ ಎದುರುದಾರರ ಮೊಟರ್ ಬೈಕ್ ನ್ನು ಸೇರಿಸಿದ್ದೆವೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಜೆಎಸ್ ಎಸ್ ಆಸ್ಪತ್ರೆ ಮೈಸೂರಿಗೆ ಕರೆದುಕೊಂಡು ಹೋಗಿರುತ್ತಾರೆ ಅಲ್ಲಿ ನಾನು 1 ವಾರಗಳ ಕಾಲ ಒಳರೋಗಿ ಯಾಗಿದ್ದೆ. ನನ್ನ ವೈದ್ಯಕೀಯ ಖರ್ಚಿಗೆ 1 ಲಕ್ಷ ಖರ್ಚು ಆಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆ ಗಾಗಿ ನನಗೆ ಮತತು 1 ಲಕ್ಷ ಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಊಟೋಪಚಾರ ಮತ್ತು ಪ್ರಯಾಣದ ವೆಚ್ಚಕ್ಕಾಗಿ 1 ಲಕ್ಷ ಖರ್ಚು ಆಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಈಗ 42 ವರ್ಷ . ನಾನು ವ್ಯವಸಾಯ ಮತ್ತು ಹೈನುಗಾರಿಕೆ ಮಾಡಿ ತಿಂಗಳಿಗೆ 40 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಈಗ ಸಂಪೂರ್ಣವಾಗಿ ಗುಣಮುಜವಾಗಿ ಮೊದಲಿನಂತೆ ಕೆಲಸ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ. ನನಗೆ ಶಾಶ್ವತ ನ್ಯೂನತೆ ಆಗಿರುವ ಕಾರಣ 1 ಲಕ್ಷ ಆದಾಯ ನಷ್ಟ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಅಪಘಾತ ಮೋಟರ್ ಬೈಕ್ ಸಂಖ್ಯೆ ಕೆಎ 09-ಹೆಚ್ ಎಂ -5375 ವಾಹನದ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ನನ್ನ ಯಾಜಮಾನರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸರಿ ಇದೆ,

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ